## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 2122 (2454) |
| ಸದಸ್ಯರ ಹೆಸರು | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | 27.03.2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೂಡಲಸಂಗಮ ಅಭಿವೃದ್ಧಿ ಮಂಡಳಿಯು ಎಷ್ಟು ಜಮೀನು ಹೊಂದಿದೆ; ಈಗ ಅದರಲ್ಲಿ ಯಾವ ಯಾವ ಯೋಜನೆಗೆ ಎಷ್ಟು ಜಮೀನನ್ನು ಉಪಯೋಗಿಸಲಾಗಿದೆ; | ಕೂಡಲಸಂಗಮ ಅಭಿವೃದ್ಧಿ ಮಂಡಳಿಯು ಒಟ್ಟು 499 ಎಕರೆ 26 ಗುಂಟೆ ಜಮೀನನ್ನು ಹೊಂದಿದೆ.<br><br>ಸದರಿ ಜಮೀನನ್ನು ಈ ಕೆಳಕಂಡ ಯೋಜನೆಗಳಿಗೆ ಉಪಯೋಗಿಸಲಾಗಿರುತ್ತದೆ.<br><br>1) ಬಸವೇಶ್ವರರ ಐಕ್ಯಮಂಟಪ<br>2) ಸಂಗಮೇಶ್ವರ ದೇವಸ್ಥಾನ<br>3) ರಥ ಬೀದಿ ಹಾಗೂ ರಥದ ಮನೆ<br>4) ಮಾರಾಟ ಮಳಿಗೆಗಳು<br>5) ಡಾರಮಿಲಿಟರಿ<br>6) ಕಲ್ಯಾಣಮಂಟಪ<br>7) ಬಸ್ ನಿಲ್ದಾಣ<br>8) ಶರಣ ಸಾಹಿತ್ಯ ಭಂಡಾರ ಹಾಗೂ ಆಡಳಿತ ಕಚೇರಿ<br>9) ದಾಸೋಹ ಭವನ<br>10) ಶರಣ ಅಂಬಿಗರ ಚೌಡಯ್ಯ ವಸತಿ ನಿಲಯ<br>11) ಯಾತ್ರಿನಿವಾಸ<br>12) ಅಥಿತಿ ಗೃಹ<br>13) ಶೌಚಾಲಯ ಹಾಗೂ ಸ್ನಾನಗೃಹಗಳು<br>14) ವಚನ ಅಧ್ಯಯನ ಕೇಂದ್ರ<br>15) ಸಭಾಭವನ<br>16) ಗೋಶಾಲೆ<br>17) ಪೂಜಾವನ<br>18) ಹೆಲಿಪ್ಯಾಡ್<br>19) ಬಸವೇಶ್ವರ ವೃತ್ತ<br>20) ಶರಣ ಅಲ್ಲಮಪ್ರಭು ವಸತಿ ನಿಲಯ<br>21) ಶರಣರ ವಸತಿ ನಿಲಯಗಳ ಸಂಕೀರ್ಣ<br>22) ಮಹಾದ್ವಾರಗಳು ಹಾಗೂ ದ್ವಿಮುಖ ರಸ್ತೆಗಳು ಯೋಜನೆಗಳು<br><br>ಹೀಗೆ ಸುಮಾರು 300 ಎಕರೆ ಕ್ಷೇತ್ರ ವ್ಯಾಪ್ತಿಯಲ್ಲಿ ಮುಕ್ತಾಯಗೊಂಡು ಸಾರ್ವಜನಿಕರ ಬಳಕೆಯಲ್ಲಿರುತ್ತವೆ. ಇನ್ನುಳಿದ ಬಾಕಿ ಜಮೀನಲ್ಲಿ ದೆಹಲಿಯ ಅಕ್ಷರಧಾಮ ಮಾದರಿಯಂತೆ ಬಸವ |

| | | |
|---|---|---|
| | | ಅಂತರಾಷ್ಟ್ರೀಯ ಮ್ಯೂಜಿಯಂ, ಶರಣಗ್ರಾಮ ಯೋಜನೆ, ವಾಣಿಜ್ಯ ಸಂಕೀರ್ಣ ಸ್ನಾನಘಟ್ಟ, ಮುಂತಾದ ಯೋಜನೆಗಳಿಗಾಗಿ ಮೀಸಲಿಡಲಾಗಿದೆ. |
| ಆ) | ಬಸವ ಅಂತರಾಷ್ಟ್ರೀಯ ಮ್ಯೂಸಿಯಂ ನಿರ್ಮಾಣ ಮಾಡಲು ಶ್ರೀ ಸಿದ್ದೇಶ್ವರ ಸ್ವಾಮಿಜಿಗಳ ಅಧ್ಯಕ್ಷತೆಯಲ್ಲಿ ಯಾವ ವರ್ಷ ಸಭೆ ಕರೆಯಲಾಗಿತ್ತು; (ಈ ಬಗ್ಗೆ ಕ್ರಮ ತೆಗೆದುಕೊಂಡ ವಿವರವನ್ನು ನೀಡುವುದು) | ಬಸವ ಅಂತರಾಷ್ಟ್ರೀಯ ಮ್ಯೂಜಿಯಂ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮಿಜೀಯವರ ಅಧ್ಯಕ್ಷತೆಯಲ್ಲಿ ವಿಶೇಷ ತಜ್ಞರ ಸಮಿತಿ ಸಭೆ ಸೆಪ್ಟಂಬರ 2 ಹಾಗೂ 3ರ ಗಳಂದು ನಡೆದಿರುತ್ತದೆ.<br><br>ಸದರಿ ಮೂಜಿಯಂ ಸ್ಥಾಪಿಸಲು ಆಧುನಿಕ ಬದುಕಿಗೆ ಪೂರಕವಾಗುವ ಹಾಗೂ ಉಪಯುಕ್ತ ಬಸವ ತತ್ವಗಳು ಇದರಲ್ಲಿ ಒಳಗೊಂಡಿರಬೇಕು. ಸುಮಾರು ಹತ್ತು ಕೋಟಿ ರೂಪಾಯಿ ವೆಚ್ಚದಲ್ಲಿ ರೂಪಗೊಂಡ ಬಸವ ಅಂತರಾಷ್ಟ್ರೀಯ ಕೇಂದ್ರ ಗೋಪುರಕ್ಕೆ ಬಣ್ಣ ಲೇಪನ ಮಾಡುವುದು ಹಾಗೂ ಮ್ಯೂಸಿಯಂ ರಚನೆ, ಶೈಲಿ, ಕಾರ್ಯಸ್ವರೂಪದ ಬಗ್ಗೆ ಚರ್ಚಿಸಿ ಕೈಗೊಂಡ ನಿರ್ಣಯದಂತೆ ಪ್ರಚಲಿತ ಕಾಮಗಾರಿಗಳು ಸಾಗುತ್ತಾ ಬಂದಿವೆ. |
| ಇ) | ಕೂಡಲ ಸಂಗಮದಲ್ಲಿ ಬಸವ ಅಂತರಾಷ್ಟ್ರೀಯ ಮ್ಯೂಸಿಯಂ ನಿರ್ಮಾಣದ ಕಾಮಗಾರಿ ಈಗ ಯಾವ ಹಂತದಲ್ಲಿದೆ; ಈ ಕಾಮಗಾರಿಯು ಸಂಪೂರ್ಣವಾಗಿ ಸ್ಥಗಿತವಾಗಿದ್ದರೆ; ಕಾರಣ ಸಮೇತ; ವಿವರ ನೀಡುವುದು; | ಬಸವ ಅಂತರಾಷ್ಟ್ರೀಯ ಕೇಂದ್ರದ ಸಿವಿಲ್ ಕಾಮಗಾರಿಯು ಎ.ಬಿ.ಸಿ ಮತ್ತು ಎಫ್ ಬ್ಲಾಕ್‌ಗಳ ಕಾಮಗಾರಿ ಮುಕ್ತಾಯವಾಗಿರುತ್ತದೆ.<br><br>ಬಾಕಿ ಉಳಿದ ಡಿ ಮತ್ತು ಇ ಬ್ಲಾಕ್‌ಗಳ ಕಾಮಗಾರಿಗಳ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.<br><br>ಸದರಿ ಕಟ್ಟಡದ ಸಿವಿಲ್ ಕಾಮಗಾರಿಗಳು ಮುಕ್ತಾಯಗೊಂಡ ನಂತರ ಕಟ್ಟಡಗಳಲ್ಲಿ ಬಾಕಿ ಉಳಿದ ವಿದ್ಯುತ್, ಧ್ವನಿ ಮತ್ತು ಬೆಳಕು ಆದುನಿಕ ಶೈಲಿಯ 3ಡಿ, ಡಯಾರಾಮ ಮಲ್ಟಿಮಿಡಿಯಾ ತಂತ್ರಜ್ಞಾನ ಮತ್ತು ಐನಿಮ್ಯಾಟ್ರಿಕ್ಸ್ ಇತ್ಯಾದಿ ಕಾಮಗಾರಿಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು. |
| ಈ | ಈ ಕಾಮಗಾರಿಗೆ ಇಲ್ಲಿಯವರೆಗೆ ಎಷ್ಟು ಅನುದಾನ ಯಾವ ಯಾವ ವರ್ಷದಲ್ಲಿ<br>ಬಿಡುಗಡೆಯಾಗಿರುತ್ತದೆ; ಇದರಲ್ಲಿ, ಬಳಕೆಯಾದ ಹಣ ಎಷ್ಟು; ಉಳಿದ ಹಣ ಎಷ್ಟು; | ಕೃಷ್ಣಾ ಬಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರಿಂದ ರೂ.64.43 ಕೋಟಿ ಅನುದಾನವನ್ನು 2017-18ನೇ ಸಾಲಿನಲ್ಲಿ ಬಿಡುಗಡೆಯಾಗಿರುತ್ತದೆ.<br><br>ಇಲ್ಲಿಯವರೆಗೆ ರೂ.54.82 ಕೋಟಿಗಳ ಅನುದಾನ ಬಳಕೆ ಮಾಡಿದ್ದು, ಈ ಕಾಮಗಾರಿಗಾಗಿ ಬಿಡುಗಡೆ ಮಾಡಿದ್ದ ಅನುದಾನದಲ್ಲಿ ರೂ.9.61 ಕೋಟಿ ಮೊತ್ತ ಬಾಕಿ ಇರುತ್ತದೆ. |

| | | |
|---|---|---|
| ೧೦ | ಬಸವ ಅಂತರಾಷ್ಟ್ರೀಯ ಮ್ಯೂಸಿಯಂ ನಿರ್ಮಾಣ ಮಾಡಲು ಎಷ್ಟು ಅನುದಾನದ ಅವಶ್ಯಕತೆಯಿದೆ; ಈ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ; ಪ್ರಸ್ತುತ ಯಾವ ಹಂತದಲ್ಲಿದೆ; | ಬಂದಿರುವುದಿಲ್ಲ. |
| ೧೧ | ಬಸವ ಅಂತರಾಷ್ಟ್ರೀಯ ಮ್ಯೂಸಿಯಂ ನಿರ್ಮಾಣ ಮಾಡುವ ಕಾಮಗಾರಿಯನ್ನು ಯಾವ ತಜ್ಞರಿಂದ ವರದಿ ಪಡೆಯಲಾಗಿದೆ; ಅದು ಯಾವ ಹಂತದಲ್ಲಿದೆ; ಈ ಬಗ್ಗೆ ಯಾವ ಕ್ರಮ ವಹಿಸಲಾಗಿದೆ? (ವಿವರವಾಗಿ ವರದಿ ನೀಡುವುದು) | ಈ ಮ್ಯೂಸಿಯಂ ನಿರ್ಮಾಣದ ಕಾಮಗಾರಿಗೆ ಸಂಬಂಧಿಸಿದಂತೆ ಬಸವ ಮ್ಯೂಸಿಯಂ ತಜ್ಞರ ಸಲಹಾ ಸಮಿತಿ ರಚಿಸಲಾಗಿರುತ್ತದೆ. ಹಾಗೂ ಬಸವೇಶ್ವರರ ಜೀವನ ದರ್ಶನ ಮತ್ತು ತತ್ವದರ್ಶನದೊಂದಿಗೆ ಅವರ ಚರಿತ್ರೆ, ಭಾಲ್ಯ, ಯೌವನ ಮತ್ತು ಜೀವನಕ್ಕೆ ಸಂಬಂಧಿಸಿದಂತೆ ಚಿತ್ರಕಲೆ, ಶಿಲ್ಪಕಲೆ, ತ್ರಿಡಿ ತಂತ್ರಜ್ಞಾನ ಮತ್ತು ಡಯಾರಾಮ್ ಕೆಲಸ ಹಾಗೂ ವಚನಾಧಾರಿತ ವಿವರಗಳ ಮಾಹಿತಿಯನ್ನು ಡಿಜಿಟಲ್ ಹಾಗೂ ಮೂರ್ತಿಗಳ ಮುಖಾಂತರ ಪ್ರದರ್ಶಿಸಲು 'ವಿಸ್ತ್ರತಾ ಯೋಜನಾ ವರದಿ'ಯನ್ನು (DPR) ತಯಾರಿಸಲು ಪ್ರೊ:ಕೆ.ಬಿ ಗುಡಸಿ, ನಿವೃತ್ತ ಕುಲಪತಿಗಳು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚನೆ ಮಾಡಲಾಗಿತ್ತು. ಸದರಿ ಸಮಿತಿಯು ದಿನಾಂಕ:23.04.2023ರಂದು ಪ್ರಥಮ ಹಂತದ ಯೋಜನಾ ವರದಿಯನ್ನು ಸಿದ್ಧಪಡಿಸಿ ಸಲ್ಲಿಸಿತ್ತು.<br><br>ಅದರಂತೆ ಈ ಮ್ಯೂಜಿಯಂನ ವಿಸ್ತ್ರತ ಯೋಜನಾ ವರದಿಯನ್ನು ತಯಾರಿಸಲು ಒಟ್ಟು 21 ಸಭೆಗಳನ್ನು ನಡೆಸಲಾಗಿದ್ದು, ಈ ಸಭೆಗಳಲ್ಲಿ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ವಸ್ತು ಸಂಗ್ರಹಾಲಯವನ್ನು ಹೇಗೆ ಮಾಡಬೇಕೆಂದು ಚರ್ಚಿಸಲಾಗಿರುತ್ತದೆ. 12 ನೇ ಶತಮಾನದಲ್ಲಿ ಸಮಗ್ರ ಶರಣರ ಜೀವನ ಸಾಧನೆಗಳನ್ನು ಒಳಗೊಂಡಂತೆ, ಬಸವಣ್ಣನವರ ಸಂಪೂರ್ಣ ಜೀವನ ಚಿತ್ರಣವನ್ನು, ವಚನಾಧಾರಿತ ಚಿಂತನೆಗಳನ್ನು, ಸಮಾಜಕ್ಕೆ ಅವರು ನೀಡಿದ ಕೊಡುಗೆಗಳನ್ನು ಅದರಲ್ಲಿ ಅಳವಡಿಸಬೇಕೆಂದು ತೀರ್ಮಾನಿಸಲಾಗಿರುತ್ತದೆ. ಎಲ್ಲಾ ಚಿಂತನೆಗಳನ್ನು ಕನ್ನಡ, ಹಿಂದಿ, ಇಂಗ್ಲೀಷ್ ಬಾಷೆಗಳಲ್ಲಿ ದೊರುಕುವಂತೆ ಮಾಡಬೇಕು ಎಂದು ನಿರ್ಣಯಿಸಲಾಯಿತು. ಸದರಿ ಸಭೆಯ ನಿರ್ಣಯದಂತೆ ಪ್ರಚಲಿತ ಕಾಮಗಾರಿಗಳು ಸಾಗುತ್ತಾ ಬಂದಿವೆ. |

ಕಂಇ 48 ಆರ್‌ಬಿಎ 2026

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು